ಕೂಡ ಮಾತಾಡುತ್ತ ನಿಂತಿದ್ದ. ಮದುವೆಯ ನಂತರ ತಂಗಿಯ ಜೊತೆಗೆ ಅವಳ ಗಂಡನೂ ನಮ್ಮಲ್ಲೇ ಇದ್ದುದು ನಮಗೆ ಹಿತವೇ ಆಗಿತ್ತು. ಅಪ್ಪ ತೀರಿಕೊಂಡಾಗ ಅವ್ವ ಒಬ್ಬಳೇ ಆಗುತ್ತಾಳೆ ಎಂದು ತಂಗಿ ಇಲ್ಲೇ ಉಳಿದಾಗ ಅವಳ ಗಂಡನೂ ಉಳಿದಿದ್ದ. ನಾನಂತೂ ನೌಕರಿ ಮಾಡುತ್ತ ಪಟ್ಟಣದವನೇ ಆಗಿದ್ದೇನೆ, ಮತ್ತೆ ಇಲ್ಲಿ ಯಾರಾದರೂ ಇರಲೇಬೇಕಲ್ಲವೆ... ತಂಗಿ ಗಂಡನನ್ನು ಒಪ್ಪಿಸಿ ಮನೆಯ ನಮ್ಮ ಚಿಂತೆಯನ್ನು ತಪ್ಪಿಸಿದ್ದಳು. ಹೆಂಡತಿಯ ಮಾತು ಮನ್ನಿಸಿದ್ದ ಅಳಿಯ ದೇವರಿಗೂ ಬಹುಶಃ ಒಳಗೊಳಗೆ ಸಂತೋಷವೇ ಆಗಿದ್ದಿರಬಹುದು... ನನ್ನ ಯೋಚನೆಯನ್ನು ಕತ್ತರಿಸಿದ ಚನ್ನಪ್ಪ, ನನ್ನ ತಂಗಿಗೆ ಹೇಳಿದ, 'ಬಸವ್ವಾ, ನಿಮ್ಮ ಅಣ್ಣ ನಾಳಿ ಚೆಂಜೀ ತನಾ ಇರತಾನ. ಅವನ ಕೂಡ ಆ ಮ್ಯಾಲ ಮಾತಾಡೂವಂತಿ. ಈಗ ನಾವು ಒಂದೀಟ ತಿರಗ್ಯಾಡಾಕ ಹೋಗತೇವು...'

ಇಂದು ನಾನು ಬರುವಷ್ಟರಲ್ಲಿ ತಂಗೆವ್ವ ಹೊಲಕ್ಕೆ ಹೋಗಿದ್ದಳು. ಈಗ ಕಣ ಸಜ್ಜು ಮಾಡುತ್ತಿದ್ದುದರಿಂದ ಗಂಡ ಹೊಲದಲ್ಲೇ ಉಳಿಯುತ್ತಾನೆ, ಅವನಿಗೆ ಊಟ ಒಯ್ಯಲೆಂದು ಬಂದಿದ್ದಳು. 'ನೀ ಅಡಿಗಿ ಮಾಡಿಕೋ. ನಾ ಒಂದೀಟ ಅಡ್ಡಾಡಿ ಬರತೇನಿ' ಎಂದು ಚನ್ನಪ್ಪನ ಕೂಡ ಹೊರಟೆ.

ಇಬ್ಬರೂ ಕೂಡಿ ಊರ ಹೊರಗಿನ ಬೋರಗಲ್ಲಿನ ತನಕ ಬಂದೆವು. ದಾರಿಯಲ್ಲಿ ಎಲ್ಲರೂ ನಮ್ಮನ್ನು ನೋಡುತ್ತ, ಮುಗುಳುನಗುತ್ತ, ನಮ್ಮ ಸ್ನೇಹವನ್ನು ಕಂಡು ಸಂತೋಷ ಪಡುವವರೇ. ಇಬ್ಬರೂ ಮಾತಾಡುತ್ತ ಆಚೆ ಬದಿಯ ಗರಡೀಮನೆಯನ್ನು ದಾಟಿದೆವು. ಅದರಾಚೆ ಚನ್ನಪ್ಪನ ಆರಾಧ್ಯ ಹನುಮಪ್ಪನ ಗುಡಿ. ನಾವು ಸಣ್ಣವರಿದ್ದಾಗ ಈ ಗುಡಿಯಲ್ಲಿಯೇ ನಮ್ಮ ಶಾಲೆ ನಡೆಯುತ್ತಿತ್ತು. ನಾವು ಇದ್ದವರಾದರೂ ಎಷ್ಟು ಮಂದಿ? ಎಲ್ಲ ವರ್ಗಗಳ ಎಲ್ಲರೂ ಒಂದೇ ಕಡೆ ಕೂತು ಕಲಿಯುತ್ತಿದ್ದೆವು. ನಮಗೆ ಸಂಗಪ್ಪ ಮಾಸ್ತರರು ಕಲಿಸುತ್ತಿದ್ದರು. ವಾರದಲ್ಲಿ 2–3 ದಿನ ಮಾತ್ರ ಕಲಿಸುತ್ತಿದ್ದರು, ಹೀಗಾಗಿ, ಅವರು ನಮಗೆ ಪ್ರೀತಿಯ ಶಿಕ್ಷಕರಾಗಿದ್ದರು. ಅದನ್ನೆಲ್ಲ ನೆನಸುತ್ತ ಸ್ವಲ್ಪ ಹೊತ್ತು ಗುಡಿಯ ಕಟ್ಟೆಯ ಮೇಲೆ ಕುಳಿತೆವು. ಅಲ್ಲಿ ಕುಳಿತಿದ್ದ ಕೆಲವು ಹಿರಿಯರು ಎಕ್ಕೆ ಎಲೆ ಸುತ್ತಿ ತಂಬಾಕು ಜುರಿ ಎಳೆಯುತ್ತಿದ್ದರು. ಅವರಿಗೆ ತ್ರಾಸು ಕೊಡುವುದು ಬೇಡ ಎಂದು ನಾವು ಎದ್ದು ಬಿಟ್ಟೆವು.

ಅಲ್ಲಿಂದ ಕುಡಿಯುವ ನೀರಿನ ಬಾವಿಯ ಕಡೆಗೆ ಬಂದೆವು. ಇಡೀ ಊರ ಮಂದಿ ಈ ಬಾವಿಯಿಂದಲೇ ನೀರು ಒಯ್ಯುತ್ತಾರೆ. ಊರೊಳಗಿನ ಉಳಿದ ಎರಡು ಬಾವಿಗಳಲ್ಲಿ ಸವುಳು ನೀರು. ಹೀಗಾಗಿ ಇಡೀ ದಿನ ಇಲ್ಲಿ ನೀರು ಹೊರುವವರ ಗದ್ದಲ ಇದ್ದೇ ಇರುತ್ತದೆ. ಈ ಇಳಿಹೊತ್ತಿನಲ್ಲಿಯೂ ಗಡಿಬಿಡಿಯಿಂದ ನೀರು ಜಗ್ಗುತ್ತ, ಕೊಡ ಹೊರುತ್ತ, ಹೊರಿಸುತ್ತ, ಅವಸರ ಮಾಡುತ್ತ, ಕಿಲಕಿಲ ನಗುತ್ತ, ಮಾತಾಡುತ್ತಿದ್ದ ಕೆಲ ಯುವತಿಯರು ಅಲ್ಲಿದ್ದರು. ಈ ಹೊತ್ತಿನಲ್ಲಿ, ಆ ಬದಿಯಿಂದ ಹೊರಟಿದ್ದ ನಮ್ಮನ್ನು ಗಮನಿಸಿದ ಕೂಡಲೇ ಅವರು ಸಾವಕಾಶ ಮಾತನಾಡತೊಡಗಿದರು. ಯಾಕೋ ನನಗೆ ತಡೆಯಲಾಗಲಿಲ್ಲ, ತಟ್ಟನೆ, ಮೆಲ್ಲನೆ, ಕೇಳಿದೆ, 'ಚನ್ನಪ್ಪ, ಆ ಕಮಲವ್ವ ಎಲ್ಲಿ ಅದಾಳೊ...? ಈಗ ಏನ ಮಾಡತಾಳು?'

ಆ ಮಬ್ಬುಗಾವಳದಲ್ಲಿ ಚನ್ನಪ್ಪ ಒಂದು ಕ್ಷಣ ನನ್ನನ್ನು ದಿಟ್ಟಿಸಿ ನೋಡಿದ, ಸುಮ್ಮನಾದ. ಮುಂದೆ ಹೆಜ್ಜೆ ಇಡುತ್ತ, ನಾನು ಮತ್ತೆ ಕೇಳಿದೆ, 'ಏನಾತು ಚನ್ನಪ್ಪ? ಅಕಿ ಮದುವಿ ಆತೆನು?'

ಚನ್ನಪ್ಪ ಸಾವಕಾಶ ಹೇಳಿದ, 'ಎರಡು ಮೂರು ವರಸ ಆತು, ಅಕಿ ಸುದ್ದೀನ ಇಲ್ಲ.'

'ಅಂದರ?'

'ಎಲ್ಯೋ ಹೋಗಿ ಗಯಾಬ ಆಗ್ಯಾಳು. ಅಕಿನ್ನ ಹುಡುಕಾಕ ಊರಾನ ಮಂದಿ ಭಾಳ ಪ್ರಯತ್ನ ಮಾಡಿದ್ದರು. ಅಕಿ ಸಿಕ್ಕಿಲ್ಲ.'

ನನಗೆ ಇದೊಂದು ರಹಸ್ಯದಂತೆ ಭಾಸವಾಗತೊಡಗಿತು. 'ಅಲ್ಲಪಾ, ಕಮಲವ್ವ ಹೋಗಿದ್ದಾದರೂ ಎಲ್ಲಿಗೆ? ಏನಾಗಿತ್ತು? ಯಾಕ ಹೋದಳು? ನಿನಗರ ಗೊತ್ತಿರಬೇಕಿತ್ತಲ್ಲ...?' ನನ್ನ ಆಸಕ್ತಿಯಲ್ಲಿ ಚನ್ನಪ್ಪನ ಬಗ್ಗೆ ಕಳಕಳಿಯಿತ್ತು. ಎಂಥದೋ ಒಗಟನ್ನು ಒಡೆಯುವ, ಭೇದಿಸುವ ಕುತೂಹಲವಿತ್ತು.

ಚನ್ನಪ್ಪನ ಹೆಜ್ಜೆ ಭಾರವಾಗತೊಡಗಿದ್ದುವು. ನಿಧಾನ ಹೇಳಿದ, 'ಬಹುಶಃ ಅವರ ಅವ್ವಾ ಅಪ್ಪಾ ಅಕಿ ಮದವಿ ಮಾಡಬೇಕಂತ ಮಾಡಿದ್ದರೇನೊ...'

'ಆದರ ಅಕಿ...' ಮುಂದೆ ಮಾತಾಡುತ್ತ ನಾನೂ ತಡವರಿಸಿದೆ.

'ಹೌದು. ನನ್ನ ಮಾಡಕೋಬೇಕಂತ ಮಾಡಿದ್ದಳು.'

'ಮತ್ತ ಏನಾತು?'

'ನಿನಗ ಗೊತ್ತ ಐತೆಲ್ಲ, ಶಿವಣ್ಣಾ, ನಾವು ಇಬ್ಬರೂ ಭಾಳ ಪ್ರೀತಿ ಮಾಡತಿದ್ದಿವಿ. ಅಕಿ ನನ್ನ ಬಿಟ್ಟ ಬ್ಯಾರೆ ಯಾರ್ನೂ ಮದವಿ ಮಾಡಕೊಳ್ಳೂ ವಿಚಾರನ ಮಾಡಿರಲಿಲ್ಲ.'

'ಹೌದು ಹೌದು. ಅದ ನನಗ ಗೊತ್ತೈತಿ. ಅಕಿ ಅವ್ವಾ ಅಪ್ಪಾರ ಕೂಡ ನೀ ಮಾತಾಡಿದ್ದಿಯೇನು?'

'ನಾ ಹೆಂಗ ಮಾತಾಡತೇನು ಶಿವಣ್ಣಾ?'

'ಮತ್ತ ಯಾರ ಮಾತಾಡಬೇಕಿತ್ತು?'

'ನಮ್ಮ ಅಪ್ಪಾ ಅವ್ವಾ ಭಾಳ ಕಟ್ಟಾ ಹಚ್ಚಿದರು. ಅಕಿ ನಮಗಿಂತ ಕೆಳಗಿನ ಜಾತಿಯಾಕಿ. ಅಂಥಾಕಿ ಕೂಡ ನಾನು ಮದವಿ ಮಾಡಿಕೋಬಾರದು ಅಂತ ಹಟಾ ಹಿಡದರು. ನಾ ಮಾಡಕೋತೇನಿ ಅಂದರ, ಇಬ್ಬರೂ ಊಟಾ ಬಿಟ್ಟ ಸಾಯತೇವ ಅಂದರು.'

'ಮುಂದ ಏನಾತು?'

'ಕಮಲವ್ವನ ಮನಿಯವರು ಅಕೀ ಮದವೀ ಎಲ್ಯೋ ಬ್ಯಾರೇ ಕಡೆ ನಿಶ್ಚೇ ಮಾಡಿದರು.'

'ಹೌದ? ಆಮ್ಯಾಲ ಏನಾತು?' ನನಗೆ ಕುತೂಹಲ ತಡೆಯದಾಗಿತ್ತು.

'ಮದವಿಗಿಂತ ಒಂದ ದಿನಾ ಮೊದಲನ ಅಕಿ ಗಯಾಬ ಆದಳು...'

'ಅಂದರ? ಊರ ಬಿಟ್ಟು ಹೋದಳ? ಎಲ್ಲಿ ಹೋದಳು?'

'ಗೊತ್ತಿಲ್ಲ.'

ಚನ್ನಪ್ಪನನ್ನು ಮತ್ತೆ ಕೇಳುವುದರಲ್ಲಿ, ವಿಚಾರಿಸುವುದರಲ್ಲಿ ಅರ್ಥವಿಲ್ಲ ಅನ್ನಿಸಿತು. ಪಾಪ, ಅವನ ವಿಷಾದ, ಸಂಕಟ, ನಿರಾಸಕ್ತಿ, ನೋವುಗಳೇ ಅವನ ಹೆಗಲ ಹೆಣವಾಗಿವೆ. ನಾನು ಕೆದಕೆದಕಿ ಕೇಳಿ ಅವನ ಹೃದಯಕ್ಕೆ ಚುಚ್ಚಿದಂತೆ ಮಾಡುವುದು ಸಮಂಜಸವಲ್ಲ ಅನ್ನಿಸಿತು.

ನಾವು ಮಾತಿಲ್ಲದೆಯೇ ಹಾಗೆಯೇ ಕೆಲವು ಹೆಜ್ಜೆ ಮುಂದೆ ಹೋದೆವು. ಈ ಹೊತ್ತಿಗಾಗಲೇ ಬೆಳದಿಂಗಳು ಚಾಚಿತ್ತು. ಊರ ಹೊರಗಿನ ನಿಸರ್ಗ, ಅಕ್ಕಪಕ್ಕದ ಹೊಲಗಳು ಬೆಳ್ಳಿಯ ಬೆಳಕು ಸೂಸತೊಡಗಿದ್ದುವು. ಸಂಜೆ ಆಗಿದ್ದರಿಂದ ಮೇಯಲು ಬಂದಿದ್ದ ದನ ಕರು, ಅವನ್ನು ಕಾಯುವವರು ಊರು ಸೇರಿಯಾಗಿತ್ತು.

'ಚನ್ನಪ್ಪ, ನನಗ ಯಾಕೋ ಹೈರಾಣ ಆದಂಗ ಅನಸಾಕತ್ತೇತಿ. ಸೊಲ್ಪ ಹೊತ್ತು ಇಲ್ಲೇ ಕುಂಡರೂನ?' ನನ್ನ ಮಾತಿನಲ್ಲಿ ಅಸಾಧ್ಯ ಬಳಲಿಕೆಯಿತ್ತು. ಚನ್ನಪ್ಪ ನಡೆದು ಬಂದ ಹಾದಿಯಲ್ಲಿಯ, ಒಂದೊಂದು ಹೆಜ್ಜೆಯೂ ನನ್ನದೇ ಅನ್ನಿಸಿತು. ಕೈಯೂರಿ ಪಕ್ಕದ ಬದುವಿನ ಮೇಲೆ ಕೂತೆ.

ಚನ್ನಪ್ಪ ಕೂಡಲಿಲ್ಲ. ಅವನಿಗೆ ತಟ್ಟನೇ ಏನೋ ನೆನಪಾಯಿತು. 'ಶಿವಣ್ಣಾ, ಈಗ ನೆನಪಾತು. ನಾ ಈಗಿಂದೀಗ ಮನಿಗೆ ಹೋಗಬೇಕು. ನಾ ಚೆಂಜೀ ಮುಂದ ಮನಿಗೆ ಹೋದಾಗ, ದನಾ ಇನ್ನೂ ಬಂದಿದ್ದಿಲ್ಲ. ನಿನಗ ಗೊತ್ತಲ್ಲ, ಈಗ ಮನ್ಯಾಗ ವಯಸ್ಸಾದ ಅಪ್ಪ ಒಬ್ಬನ ಅದಾನು. ಹಿಂಗಾಗಿ, ನಾ ಈಗಿಂದೀಗ ಹೋಗಬೇಕು...'

ನನ್ನ ಪ್ರತಿಕ್ರಿಯೆಗೂ ಕಾಯದೇ ಹೊರಟೇ ಬಿಟ್ಟ. ನನ್ನೆಡೆಗೆ ನೋಡಲಿಲ್ಲ ಸಹ. ಊರಿನ ಕಡೆಗೆ ಓಡುವವರಂತೆ ದಾಪುಗಾಲು ಹಾಕತೊಡಗಿದ.

ಅವನ ನಡೆಯಿಂದ ಬೇಸರವೆನಿಸಲಿಲ್ಲ, ಅಚ್ಚರಿ ಮಾತ್ರ ಆಯಿತು. ಅವನ ಮನೆಯ ದೋಲಾಯಮಾನ ಪರಿಸ್ಥಿತಿಯ ಅರಿವಿನಿಂದ ಅವನನ್ನು ಕರೆಯುವ, ತಡೆಯುವ ಮನಸ್ಸು ನಿಗ್ರಹಿಸಿಕೊಂಡೆ. ಆದರೆ ಇಡೀ ವಿಷಯದಲ್ಲಿ ಏನೋ ಗೊಂದಲ, ತೊಡಕು, ಕಗ್ಗಂಟು ಮನಸ್ಸನ್ನು ಕದಡಿದ್ದು ಅರಿವಿಗೆ ಬಂತು. ಕಮಲವ್ವನನ್ನು ಹುಡುಕಲು, ಅವಳನ್ನು ಕಾಣಲು, ಅವಳಿಲ್ಲದ ಈ




## ಜನ ಜಂಗುಳಿ

ರಾಯರ ಅಂಗಡಿಯಲ್ಲಿ
ಸದಾ ಜನ ಜಂಗುಳಿ
ಯಾಕೆಂದರೆ
ರಾಯರ ಮಗಳು
ಕೂತಿರುತ್ತಾಳೆ
ಮಂಡದಲ್ಲಿ

**—ಕಾಸರಗೋಡು ಅಶೋಕ್ ಕುಮಾರ್**